ಡಾ: ಎ.ಬಿ.ಮಾಲಕರೆಡ್ಡಿ: ಆಗಬಹುದು.

ವಿಷಯ: ಗುಡಿಬಂಡೆ ಹಾಗೂ ಬಾಗೇಪಲ್ಲಿ ತಾಲ್ಲೂಕುಗಳಲ್ಲಿ ಕುಡಿಯುವ ನೀರಿನ ಸಮಸ್ಯೆ.

302(3051)

ಶ್ರೀ ಸಂಪಂಗಿ.ಎನ್.(ಬಾಗೇಪಲ್ಲಿ): ಮಾನ್ಯ ಗ್ರಾಮೀಣಾಭಿವೃದ್ಧಿ, ಪಂಚಾಯತ್ ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಗುಡಿಬಂಡೆ ಹಾಗೂ ಬಾಗೇಪಲ್ಲಿ ತಾಲ್ಲೂಕುಗಳಲ್ಲಿ ಕುಡಿಯುವ ನೀರಿನ ಸಮಸ್ಯೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ?

ಆ) ಹಾಲಿ ಸರಬರಾಜು ಮಾಡುತ್ತಿರುವ ನೀರಿನಲ್ಲಿ ಫ್ಲೋರೈಡ್ ಅಂಶ ಜಾಸ್ತಿಯಿರುವುದರಿಂದ ಜನರಿಗೆ ತೊಂದರೆಯುಂಟಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ?

ಇ) ಉತ್ತಮ ಕುಡಿಯುವ ನೀರನ್ನು ಸಾಕಷ್ಟು ಸರಬರಾಜು ಮಾಡಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು?

ಶ್ರೀ ಎಂ.ವೈ ಘೋರ್ಪಡೆ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು):

ಅ) ಗುಡಿಬಂಡೆ ಮತ್ತು ಬಾಗೇಪಲ್ಲಿ ತಾಲ್ಲೂಕಿನ ಕೆಲವು ಗ್ರಾಮೀಣ ಜನವಸತಿಗಳಲ್ಲಿ ಕುಡಿಯುವ ನೀರಿನ ಸಮಸ್ಯೆಯಿರುವುದು ಸರ್ಕಾರದ ಗಮನಕ್ಕೆ ಬಂದಿದೆ.

ಆ) ಸದರಿ ತಾಲ್ಲೂಕುಗಳ ಕೆಲವು ಜನವಸತಿಗಳ ಕುಡಿಯುವ ನೀರಿನಲ್ಲಿ ಅಧಿಕ ಫ್ಲೋರೈಡಿನ ಅಂಶ ಕಂಡು ಬಂದಿದ್ದು, ಕುಡಿಯುವ ನೀರಿಗೆ ತೊಂದರೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆ.

ಇ) ಗುಣಮಟ್ಟ ಸಮಸ್ಯೆ ಎದುರಿಸುತ್ತಿರುವ ಜನವಸತಿಗಳಿಗೆ ಸುರಕ್ಷಿತ ಕುಡಿಯುವ ನೀರಿನ ಪೂರೈಕೆಗಾಗಿ ಸಬ್-ಮಿಷನ್ ಕಾರ್ಯಕ್ರಮದಡಿ ಯೋಜನೆಗಳನ್ನು ರೂಪಿಸಿ, ಅನುದಾನ ಲಭ್ಯತೆಗನುಗುಣವಾಗಿ, ಯೋಜನೆಗಳನ್ನು ಹಂತ ಹಂತವಾಗಿ ಅನುಷ್ಠಾನಗೊಳಿಸಲು ಕ್ರಮ ಕೈಗೊಳ್ಳಲಾಗುತ್ತಿದೆ.

ಶ್ರೀ ಎನ್.ಸಂಪಂಗಿ: ಮಾನ್ಯ ಅಧ್ಯಕ್ಷರೇ, ಮಾನ್ಯ ಮಂತ್ರಿಗಳು ಉತ್ತರವನ್ನು ಕೊಟ್ಟಿದ್ದಾರೆ. ಹಾಲಿ ಸರಬರಾಜು ಮಾಡುತ್ತಿರುವ ಕುಡಿಯುವ ನೀರಿಲ್ಲಿನ ಫ್ಲೋರೋಫ್ಲೋರಿಲ್ ಅಂಶ ಜಾಸ್ತಿ ಇರುವುದರಿಂದ ಜನರಿಗೆ ತೊಂದರೆಯುಂಟಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ಎಂದು ಪ್ರಶ್ನೆ ಕೇಳಿದ್ದೆ. ಸರ್ಕಾರದ ಗಮನಕ್ಕೆ ಬಂದಿದೆ ಎಂದು ಸಚಿವರು ಹೇಳಿದ್ದಾರೆ. ಇವತ್ತು ನಮ್ಮಲ್ಲಿ ಸರಬರಾಜಾಗುತ್ತಿರುವ ನೀರಿನಲ್ಲಿ ಫ್ಲೋರೈಡ್ ಅಂಶ ಹೆಚ್ಚಿಗೆ ಇರುವುದರಿಂದ ಜನರು ಬಹಳ ಭೀತಿ ಪಡುತ್ತಿದ್ದಾರೆ. ಈಗಾಗಲೇ ನಾವು ಬಹಳ ಸಲ ಈ ಬಗ್ಗೆ ಸದನದಲ್ಲಿ ಚರ್ಚೆ ಮಾಡಿದ್ದೇವೆ. ಸರ್ಕಾರ ಈಗಾಗಲೇ ಸ್ವಲ್ಪ ಹಣ ಮಂಜೂರು ಮಾಡಿದ್ದು, ಸ್ವಲ್ಪ ಕುಡಿಯುವ ನೀರಿನ ವ್ಯವಸ್ಥೆ ಆಗಿದೆ. ಆದರೆ ಶಾಶ್ವತವಾಗಿ ಇಡೀ ತಾಲ್ಲೂಕಿಗೆ ಕುಡಿಯುವ ನೀರಿನ ವ್ಯವಸ್ಥೆ ಆಗಬೇಕಾಗಿದೆ. ತಮಗೆಲ್ಲ ಗೊತ್ತಿರುವ ಹಾಗೆ, ಚಿತ್ರಾವತಿ ನದಿಗೆ ಅಣೆಕಟ್ಟು ನಿರ್ಮಿಸುವ ಬಗ್ಗೆ ಈಗಾಗಲೇ ಆಂಧ್ರ ಪ್ರದೇಶದ ವಿಧಾನಸಭೆಯಲ್ಲಿ ಕೆಲವು ಚರ್ಚೆಗಳು ನಡೆದು ಊಹಾಪೋಹಗಳೆದ್ದಿವೆ. ಇದರಿಂದ ಬಾಗೇಪಲ್ಲಿ ಮತ್ತು ಗುಡಿಬಂಡೆ ತಾಲ್ಲೂಕಿನ ಜನ ಭಯಭೀತರಾಗಿದ್ದಾರೆ. ಚಿತ್ರಾವತಿ ಅಣೆಕಟ್ಟನ್ನು ನಿರ್ಮಿಸುತ್ತಾರೆಯೋ, ಇಲ್ಲವೋ ಎನ್ನುವ ಒಂದು ಅನುಮಾನ ಕೂಡ ಅವರಿಗೆ ಬಂದಿದೆ. ಈ ಬಗ್ಗೆ ಆಂಧ್ರ ಪ್ರದೇಶದ ಸದಸ್ಯರು ಯಾವ ಒಂದು ಬ್ಲಾಕ್‌ಮೇಲ್ ಮಾಡಿದರೂ, ಅಥವಾ ಯಾವುದೇ ರೀತಿಯ ಹೆದರಿಕೆ ಹಾಕಿದರೂ ಕೂಡ ನಾವೆಲ್ಲರೂ ಸರ್ಕಾರದ ಜೊತೆ, ನಮ್ಮ ಮುಖ್ಯಮಂತ್ರಿಗಳ ಜೊತೆಯಲ್ಲಿದ್ದೇವೆ. ಆದುದರಿಂದ, ಚಿತ್ರಾವತಿ ಅಣೆಕಟ್ಟನ್ನು ನಿರ್ಮಿಸಿ ನಮ್ಮ ಭಾಗದ ಎಲ್ಲಾ ಜನರಿಗೆ ಶಾಶ್ವತವಾದ ಕುಡಿಯುವ ನಿರನ್ನು ಕೊಟ್ಟು ಫ್ಲೋರೈಡ್‌ನಿಂದ ಬರತಕ್ಕಂಥ ರೋಗಗಳನ್ನು ನಿರ್ನಾಮ ಮಾಡತಕ್ಕಂಥಾದ್ದು ನಮ್ಮ ಮುಖ್ಯಮಂತ್ರಿಯವರ ಕೈಯ್ಯಲ್ಲಿದೆ. ಇವತ್ತು ನಾನು ಬಾಗೇಪಲ್ಲಿ ಕ್ಷೇತ್ರದ ಜನರ ಪರವಾಗಿ ಅವರಲ್ಲಿ ಪ್ರಾರ್ಥನೆ ಮಾಡಿಕೊಳ್ಳುತ್ತಿದ್ದೇನೆ, ಚಿತ್ರಾವತಿ ಅಣೆಕಟ್ಟನ್ನು ನಿರ್ಮಿಸಿ, ಫ್ಲೋರೈಡ್ ಅಂಶವನ್ನು ನಿರ್ಮೂಲನ ಮಾಡಿ ಗುಡಿಬಂಡೆ ಮತ್ತು ಬಾಗೇಪಲ್ಲಿ ತಾಲ್ಲೂಕಿಗೆ ಕುಡಿಯುವ ನೀರಿನ ವ್ಯವಸ್ಥೆಯನ್ನು ಮಾಡಿಕೊಡಬೇಕು. ಇದು ಈಗಾಗಲೇ ಮಾನ್ಯ ಮುಖ್ಯ ಮಂತ್ರಿಗಳ ಗಮನಕ್ಕೂ ಹೋಗಿರುವುದರಿಂದ ನಾನು ಇದರ ಬಗ್ಗೆ ಹೆಚ್ಚಿಗೆ ಚರ್ಚೆ ಮಾಡುವುದಕ್ಕೆ ಇಷ್ಟಪಡುವುದಿಲ್ಲ, ಧನ್ಯವಾದಗಳು.

ಶ್ರೀ ಎಂ.ವೈ.ಘೋರ್ಪಡೆ: ಮಾನ್ಯ ಅಧ್ಯಕ್ಷರೇ, ಇಲ್ಲಿ ಬಂದಿರತಕ್ಕಂಥ ತೊಂದರೆ ಎಂದರೆ ಫ್ಲೋರೈಡ್. ಗುಡಿಬಂಡೆಯಲ್ಲಿ 130 ಹಳ್ಳಿಗಳಿದ್ದು, ಅದರಲ್ಲಿ ಅರ್ಧ ಹಳ್ಳಿಗಳಲ್ಲಿ ಫ್ಲೋರೈಡ್ ತೊಂದರೆ ಇದೆ. ಅದೇ ರೀತಿ, ಬಾಗೇಪಲ್ಲಿಯಲ್ಲಿ 378 ಹಳ್ಳಿಗಳಿದ್ದು, ಅದರಲ್ಲಿ ಶೇಕಡ 57ರಷ್ಟು ಹಳ್ಳಿಗಳಲ್ಲಿ ಫ್ಲೋರೈಡ್ ತೊಂದರೆ ಇದೆ. ಅದಕ್ಕೋಸ್ಕರ, ರಾಜೀವ್ ಗಾಂಧಿ ಮಿಷನ್‌ನವರು ಇದರ ಬಗ್ಗೆ ಕಾಳಜಿ ವಹಿಸಿ ಮಾಡಬೇಕು ಎಂದು ನಾವು ಹೇಳಿದ್ದೇವೆ. ಮಿಷನ್ ಕಡೆಯಿಂದ ಇದನ್ನು ಮಾಡಿಸಲು ಪ್ರಾಜೆಕ್ಟ್ ರಿಪೋರ್ಟ್ ಕೂಡ ತಯಾರಾಗುತ್ತಿದೆ. ಇದರ ಜೊತೆಗೆ, ಅಲ್ಲಿ ಭೈರಸಾಗರ

ಕೆರೆ ಎಂದು ಇದೆ. ಆ ಕೆರೆಯಿಂದೇನಾದರೂ ಒಳ್ಳೆಯ ನೀರು ಸಿಗುತ್ತದೆಯೇ ಎಂದು ನಾವು ನೋಡುತ್ತಿದ್ದೇವೆ. ನಮ್ಮ ಮುಂದೆ ಇರತಕ್ಕಂಥ ಮಾರ್ಗಗಳು ಇವೆರಡೇ. ಇವರೆಡನ್ನೂ ಕೂಡ ನಾವು ಸಂಪೂರ್ಣವಾಗಿ ಕಾರ್ಯಗತ ಮಾಡುವಂಥ ಪ್ರಯತ್ನ ಮಾಡುತ್ತೇವೆ.

ವಿಷಯ: ಕಾರ್ಕಳ ತಾಲ್ಲೂಕಿನ ಡಿಗ್ರಿ ಪ್ರಥಮ ದರ್ಜೆ ಕಾಲೇಜ್ ಕಟ್ಟಡದ ದುರಸ್ತಿ.

304:(3070)

ಶ್ರೀ ಗೋಪಾಲ ಬಂಡಾರಿ ಹೆಚ್.(ಕಾರ್ಕಳ): ಮಾನ್ಯ ಉನ್ನತ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕಾರ್ಕಳ ತಾಲ್ಲೂಕಿನ ಡಿಗ್ರಿ ಪ್ರಥಮ ದರ್ಜೆ ಕಾಲೇಜಿನ ಕಟ್ಟಡವು ಮಳೆಗಾಲದಲ್ಲಿ ತುಂಬಾ ಸೋರುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಹಾಗಿದ್ದಲ್ಲಿ ಇದನ್ನು ದುರಸ್ತಿ ಮಾಡಲು ಸರ್ಕಾರ ತೆಗೆದುಕೊಂಡ ಕ್ರಮಗಳೇನು?

ಡಾ.ಜಿ.ಪರಮೇಶ್ವರ (ಉನ್ನತ ಶಿಕ್ಷಣ ಸಚಿವರು):

ಅ) ಬಂದಿದೆ.

ಆ) ದುರಸ್ತಿಗೊಳಿಸಲು ಸೂಕ್ತಕ್ರಮ ಕೈಗೊಳ್ಳಲಾಗುವುದು.

ಶ್ರೀ ಹೆಚ್.ಗೋಪಾಲ ಭಂಡಾರಿ: ಮಾನ್ಯ ಅಧ್ಯಕ್ಷರೇ, ಕಾರ್ಕಳ ತಾಲ್ಲೂಕಿನಲ್ಲಿ ಪ್ರಥಮದರ್ಜೆ ಕಾಲೇಜುಗಳಿಗಾಗಿ ಎರಡು ಕಟ್ಟಡಗಳಿವೆ. ಒಂದು ಕಟ್ಟಡ ಕಾರ್ಕಳದಲ್ಲಿದೆ. ಇನ್ನೊಂದು ಕಟ್ಟಡ ಕಾರ್ಕಳ ತಾಲ್ಲೂಕಿನ ಹೆಬ್ರಿಯಲ್ಲಿದೆ. ಇವರಡೂ ಹೊಸ ಕಟ್ಟಡಗಳು, ಸುಮಾರು 3-4 ವರ್ಷಗಳ ಹಿಂದೆ ಆದಂಥವು. ಕಾರ್ಕಳದಲ್ಲಿರುವಂಥ ಕಟ್ಟಡ ಕಳೆದ ವರ್ಷ ಆದದ್ದು. ಇದು ಬಹಳ ಒಳ್ಳೆಯ ರೀತಿಯಲ್ಲಿದೆ, ಅದೇನೂ ಸೋರುತ್ತಿಲ್ಲ. ಆದರೆ ಹೆಬ್ರಿಯಲ್ಲಿರತಕ್ಕಂಥ ಕಟ್ಟಡಕ್ಕೆ ಏನಾಗಿದೆ ಎಂದರೆ, ಮಳೆಗಾಲದಲ್ಲಿ ಮಳೆಯ ನೀರೆಲ್ಲಾ ಕಟ್ಟಡದ ಒಳಗೆ ಬರಕ್ಕಂಥ ಪರಿಸ್ಥಿತಿ ಇದೆ. ನನಗನ್ನಿಸುತ್ತದೆ, ಇದು ಕಟ್ಟಡದ ಕಳಪೆ ಕಾಮಗಾರಿಯಿಂದಾಗಿ ಅಲ್ಲ, ಕಟ್ಟಡದ ವಿನ್ಯಾಸದಲ್ಲಿ ಇರತಕ್ಕಂಥ ದೋಷ ಎಂದು. ಚೀಫ್ ಆರ್ಕಿಟೆಕ್ಟ್‌ನವರು ಒದಗಿಸಿದಂಥ ವಿನ್ಯಾಸದಲ್ಲಿ ಮಹಡಿಯಿಂದ ನೀರು ಕೆಳಗೆ ಹೋಗುವಂಥ ರೀತಿಯಲ್ಲಿ ಇಲ್ಲ. ಒಂದು ರೀತಿಯಲ್ಲಿ ಕಪಾಟಿನ ರೀತಿಯಲ್ಲಿ ಕಟ್ಟಡವನ್ನು ಕಟ್ಟಿದ್ದಾರೆ. ತಮಗೇ